C.R.P.67

Form No.4 (Civil)
Deposition Sheets
(R.P.No.57)

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ- 24 ಪಿ. ಡಬ್ಲ್ಯೂ-17

ದಿನಾಂಕಃ- 20.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ದೇವರಾಜು |
| ತಂದೆಯ ಹೆಸರು | ಪುಟ್ಟಸ್ವಾಮಿ |
| ವಯಸ್ಸು | 28 ವರ್ಷ |
| ಉದ್ಯೋಗ | ಕ್ಯಾಂಟರ್ ಚಾಲಕ |
| ವಾಸ | ಮದ್ದೂರು |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. ಕೆಎ.11.ಇಜೆ.9688 ಸಂಖ್ಯೆಯ ದ್ವಿಚಕ್ರ ವಾಹನವು ನನ್ನ ಮಾಲೀಕತ್ವಕ್ಕೆ ಒಳಪಟ್ಟಿದೆ. ನಾನು ಕ್ಯಾಂಟರ್ ಚಾಲಕನಾಗಿ ಕರ್ತವ್ಯ ಮಾಡುತ್ತಾ ಇದ್ದೇನೆ. ಓರ್ವ ಅಬಿನಯ್ ಎನ್ನುವವರಿಗೆ ಸೇರಿದ ಕ್ಯಾಂಟರ್ ವಾಹನವನ್ನು ನಾನು ಚಾಲನೆ ಮಾಡಿಕೊಂಡು ಜೀವನ ಮಾಡುತ್ತಾ ಇದ್ದೆನು. ಸದರಿ ಕ್ಯಾಂಟರ್ ವಾಹನದಲ್ಲಿ ಬೇರೆ ಬೇರೆ ಹಳ್ಳಿಗಳಿಗೆ ಹೋಗಿ ರೈತರಿಂದ ಹಾಲು ಸಂಗ್ರಹ ಮಾಡಿಕೊಂಡು ನಂತರ ಗೆಜ್ಜಲಗೆರೆ ಗ್ರಾಮದಲ್ಲಿರುವ ಕೆ ಎಂ ಎಫ್ ಫ್ಯಾಕ್ಟರಿಗೆ ಸರಬರಾಜು ಮಾಡುತ್ತಾ ಇದ್ದೆನು.

2. ಮೇಲೆ ಹೇಳಿದ ಅಭಿನಯ್ ರವರ ಮನೆಯು ಗೆಜ್ಜಲಗೆರೆ ಗ್ರಾಮದ ಬೋರಪ್ಪ ಗುಡಿಯ ಪಕ್ಕದಲ್ಲಿ ಇದೆ. ಪ್ರತಿ ದಿನ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಮದ್ದೂರಿನಿಂದ ಹೊರಟು ಗೆಜ್ಜಲಗೆರೆ ಗ್ರಾಮಕ್ಕೆ ಹೋಗಿ ಅಲ್ಲಿ ನನ್ನ ದ್ವಿಚಕ್ರ ವಾಹನವನ್ನು ನಿಲ್ಲಿಸಿ ನಂತರ ಅಭಿನಯ್ ರವರಿಗೆ ಸೇರಿದ ಕ್ಯಾಂಟರ್ ವಾಹನವನ್ನು ಚಾಲನೆ ಮಾಡಿಕೊಂಡು ವಿವಿಧ ಹಳ್ಳಿಗಳಿಗೆ ಹೋಗುತ್ತಾ ಇದ್ದೆನು. ಇಷ್ಟು ವಿಷಯವನ್ನು ಬಿಟ್ಟರೆ ನನಗೆ ಬೇರೆ ಏನೂ ಸಂಗತಿಗಳು ಗೊತ್ತಿಲ್ಲ.

3. ಮೇಲೆ ಹೇಳಿದ ನನ್ನ ದ್ವಿಚಕ್ರ ವಾಹನವನ್ನು ನನ್ನ ಮಾಲೀಕರಾದ ಅಭಿನಯ್ ರವರು ನ್ಯಾಯಾಲಯದಿಂದ ನನಗೆ ಬಿಡುಗಡೆ ಮಾಡಿಸಿಕೊಟ್ಟಿದ್ದಾರೆ. ಯಾವ ಕಾರಣದಿಂದ ನನ್ನ ದ್ವಿಚಕ್ರ ವಾಹನವನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಲಾಗಿತ್ತು ಎಂದು ನನಗೆ ಗೊತ್ತಿಲ್ಲ.

4. ಗೆಜ್ಜಲಗೆರೆ ಗ್ರಾಮದ ಹೇಮಂತ ಕುಮಾರ ಮತ್ತು ಸುನಿಲ್ ಮತ್ತು ಶ್ರೀಕಂಠ ರವರ ಪರಿಚಯ ನನಗೆ ಇರುವುದಿಲ್ಲ. ಹೇಮಂತ ಕುಮಾರ ರವರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯದ ಮಂದೆ ನಿಂತಿರುವ ಆರೋಪಿಗಳ ಪರಿಚಯ ನನಗೆ ಇರುವುದಿಲ್ಲ.

5. ಮೇಲೆ ಹೇಳಿದ ನನ್ನ ದ್ವಿಚಕ್ರ ವಾಹನಕ್ಕೆ ಸಂಬಂಧಪಫಟ್ಟ ಹಾಗೆ ಮದ್ದೂರು ಪೊಲೀಸ್ ಠಾಣೆಯ ಅಧಿಕಾರಿಗಳು ನನ್ನನ್ನು ಕರೆಸಿದ್ದರು ಮತ್ತು ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಯಾವ ಕಾರಣದಿಂದ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಪೊಲೀಸರು ನನಗೆ ಯಾವುದೇ ವಿಷಯಗಳನ್ನು ಹೇಳಿರುವುದಿಲ್ಲ, ಬದಲಿಗೆ ನನ್ನ ಸಹಿಯನ್ನು ಮಾತ್ರ ಪಡೆದುಕೊಂಡಿದ್ದಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

> (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿದಾರರು ಇವರ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ ಮತ್ತು ಆ ಕಾರಣದಿಂದ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕು ಮತ್ತು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೊಡಬೇಕು ಎಂದು ಪ್ರಾರ್ಥನೆ ಮಾಡಿದ್ದಾರೆ.
>
> ಕಡತವನ್ನು ಪರಿಶೀಲನೆ ಮಾಡಿ ನೋಡಲಾಗಿ ಈ ಸಾಕ್ಷಿದಾರರು ಕಲಂ 161ರ ಅಡಿಯಲ್ಲಿ ನೀಡಿರುವ ಹೇಳಿಕೆಯು ಲಭ್ಯ ಇದೆ ಮತ್ತು ಈ ಸಾಕ್ಷಿದಾರರು ತಮ್ಮ ಸದರಿ ಹೇಳಿಕಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದಾರೆ, ಆಕಾರಣದಿಂದ ಮಾನ್ಯ ಅಭಿಯೋಜಕರ ಪ್ರಾರ್ಥನೆಯನ್ನು ಮಾನ್ಯ ಮಾಡಿದೆ. )

<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

6. ದಿಃ 10.05.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಾನು ಮೇಲೆ ಹೇಳಿದ ನನ್ನ ಮೋಟಾರು ಸೈಕಲ್ಲನ್ನು ಗೆಜ್ಜಲಗೆರೆ ಗ್ರಾಮದಲ್ಲಿರುವ ಅಭಿನಯ್ ರವರ ಮನೆಯ ಮುಂದೆ ನಿಲ್ಲಿಸಿ ನನ್ನ ಕೆಲಸಕ್ಕೆ ಹೋಗಿದ್ದೆನು ಎಂದರೆ ಸರಿ.

7. ದಿಃ 10.05.2021 ರಂದು ನಾನು ನನ್ನ ಮೋಟಾರು ಸೈಕಲ್ಲನ್ನು ಅಭಿನಯ್ ರವರ ಮನೆಯ ಮುಂದೆ ನಿಲ್ಲಿಸಿದ ಸಮಯದಲ್ಲಿ ಅಭಿನಯ್ ರವರ ಸ್ನೇಹಿತರಾದ ಹೇಮಂತ ಕುಮಾರ ರವರು ನನ್ನ ಮೋಟಾರು ಸೈಕಲ್ಲನ್ನು ನನ್ನಿಂದ ಪಡೆದುಕೊಂಡರು ಎಂದರೆ ಸುಳ್ಳು. ಸದರಿ ಹೇಮಂತ ಕುಮಾರ ಮತ್ತು ಸದರಿ ಅಭಿನಯ್ ರವರು ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ.

8. ಹೇಮಂತ ಕುಮಾರ ಮತ್ತು ಸದರಿ ಅಭಿನಯ್ ರವರು ಬೇರೆ ಬೇರೆ ಹಳ್ಳಿಗಳಿಂದ ರೈತರಿಂದ ಹಾಲನ್ನು ಸಂಗ್ರಹಿಸಿ ಕ್ಯಾಂಟರ್ ವಾಹನದಲ್ಲಿ ತೆಗೆದುಕೊಂಡು ಹೋಗಿ ಕೆ ಎಂ ಎಫ್ ಫ್ಯಾಕ್ಟರಿಗೆ ಸರಬರಾಜು ಮಾಡುತ್ತಿದ್ದರು ಎಂದರೆ ಸರಿ.

9. ಓರ್ವ ಸುನಿಲ್ ಕುಮಾರ ಎನ್ನುವವರು ಹೇಮಂತ ಕುಮಾರ ರವರ ಮನೆಯ ಎದುರಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

10. ಗೆಜ್ಜಲಗೆರೆ ಗ್ರಾಮದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ರವರ ಪುತ್ಥಳಿ ಇದೆ ಎಂದರೆ ಸರಿ.

11. ದಿಃ 09.05.2021 ರಂದು ರಾತ್ರಿ ಸುಮಾರು 7.45ರ ಸಮಯದಲ್ಲಿ ಗೆಜ್ಜಲಗೆರೆಯ ಇಂದುಕುಮಾರ ಮತ್ತು ಗೆಜ್ಜಲಗೆರೆಯ ಸಂತೋಷ ಎನ್ನುವವರ ಮಧ್ಯೆ ಹಾಲು ಸರಬರಾಜು ಮಾಡುವ ವಿಷಯದಲ್ಲಿ ಗಲಾಟೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

12. ಕೆ ಎಂ ಎಫ್ ಫ್ಯಾಕ್ಟರಿಗೆ ಹಾಲು ಸರಬರಾಜು ಮಾಡುವ ಪ್ರಕ್ರಿಯೆಗೆ ಸಂಬಂಧಪಟ್ಟ ಟೆಂಡರನ್ನು ಮೊದಲು ಇಂದುಕುಮಾರನು ಪಡೆದುಕೊಂಡಿದ್ದನು ಮತ್ತು ಆ ಟೆಂಡರ್ ನ ಅವಧಿಯು ಮುಗಿದ ನಂತರ ಮತ್ತೊಮ್ಮೆ ಆ ಟೆಂಡರನ್ನು ಕೆ ಎಂ ಎಫ್ ರವರು ಘೋಷಣೆ ಮಾಡಿದಾಗ ಹೇಮಂತ ಕುಮಾರ ರವರು ಓರ್ವ ಪವನಕುಮಾರ ಎನ್ನುವವರ ಹೆಸರಿನಲ್ಲಿ ಸದರಿ ಟೆಂಡರನ್ನು ಪಡೆದುಕೊಡಿದ್ದನು ಮತ್ತು ಈ ಸಂಬಂಧವಾಗಿ ಇಂದುಕುಮಾರ ಮತ್ತು ಹೇಮಂತ ಕುಮಾರ ರವರ ಮಧ್ಯೆ ದ್ವೇಷ ಇತ್ತು ಎಂದರೆ ನನಗೆ ಗೊತ್ತಿಲ್ಲ.

13. ದಿಃ 09.05.2021 ರಂದು ಇಂದುಕುಮಾರ ಮತ್ತು ಸಂತೋಷ ರವರ ಮಧ್ಯೆ ಜಗಳ ಆಗಿದೆ ಮತ್ತು ಆ ಜಗಳವನ್ನು ಗೆಜ್ಜಲಗೆರೆ ಗ್ರಾಮದ ಜಿ ಪಿ ಮೋಹನ ಮತ್ತು ಜಿ ಎಸ್ ತಮ್ಮೆಗೌಡ ಎನ್ನುವವರು ಸುಮಾಧಾನ ಪಡಿಸಿ ಕಳುಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 09.05.2021 ರಂದು ಆಗಿರುವ ಗಲಾಟೆಯು ಸರ್ ಎಂ. ವಿಶ್ವೇಶ್ವರಯ್ಯ ರವರ ಪುತ್ಥಳಿ ಬಳಿ ನಡೆದಿದೆ ಎಂದರೆ ನನಗೆ ಗೊತ್ತಿಲ್ಲ.

14. ಮೇಲೆ ಹೇಳಿದ ಮೋಹನ ಮತ್ತು ತಮ್ಮೆಗೌಡ ರವರು ಜಗಳವನ್ನು ಬಿಡಿಸಿ ಸಂತೋಷ ಮತ್ತು ಇಂದುಕುಮಾರನನ್ನು ಸಮಾಧಾನ ಪಡಿಸಿ ಕಳುಹಿಸುವ ಸಮಯಕ್ಕೆ ಹೇಮಂತ ಕುಮಾರನು ಆ ಸ್ಥಳಕ್ಕೆ ಬಂದನು ಮತ್ತು " ಏನು ಜಗಳ " ಎಂದು ವಿಚಾರಿಸಿದನು ಮತ್ತು ಆಗ ಹೇಮಂತ ಕುಮಾರ ಮತ್ತು 1 ನೇ ಆರೋಪಿ ಯಾದ ಇಂದುಕುಮಾರನ ಮಧ್ಯೆ ಮಾತಿಗೆ ಮಾತು ಬೆಳೆಯಿತು ಎಂದರೆ ನನಗೆ ಗೊತ್ತಿಲ್ಲ.

15. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಯು ಆಗಿದೆ ಮತ್ತು ನಂತರ ಹೇಮಂತ ಕುಮಾರನು ಆ ಸ್ಥಳದಿಂದ ಹೊರಟು ಹೋದನು ಮತ್ತು ಆಗ 1 ನೇ ಆರೋಪಿ ಇಂದುಕುಮಾರನು ಆ ಸ್ಥಳದಲ್ಲಿಯೇ ಇದ್ದ

ಪವನಕುಮಾರನನ್ನು ಉದ್ದೇಶಿಸಿ " ನೀನು ಗೆದ್ದು ಹೋಗಿದ್ದೀಯಾ, ಇನ್ನು 2-3 ದಿನ ನೋಡು ಹೇಮಂತ ಕುಮಾರನನ್ನು ಮುಗಿಸುತ್ತೇವೆ "ಎಂದು ಹೇಳಿ ಹೊರಟು ಹೋದನು ಎಂದರೆ ನನಗೆ ಗೊತ್ತಿಲ್ಲ.

16. ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಗಳು ಆಗಿವೆ ಮತ್ತು ಆ ಎಲ್ಲಾ ವಿಷಯಗಳು ಈ ಪ್ರಕರಣದಲ್ಲಿರುವ ಗಾಯಾಳುವಾದ ಸುನಿಲ್ ಕುಮಾರನ ಮೂಲಕ ನನಗೆ ತಿಳಿದು ಬಂದಿದೆ ಎಂದರೆ ಸುಳ್ಳು.

17. ದಿಃ 10.05.2021 ರಂದು ರಾತ್ರಿ 8.30ರ ಸಮಯದಲ್ಲಿ ಹೇಮಂತ ಕುಮಾರನು ಮೇಲೆ ಹೇಳಿದ ನನ್ನ ದ್ವಿಚಕ್ರ ವಾಹನದಲ್ಲಿ ಅಂದರೆ ಕೆಎ.11.ಇಜೆ.9688 ಮೋಟಾರು ಸೈಕಲ್ಲಿನಲ್ಲಿ ಹೋಗುತ್ತಾ ಇದ್ದಾಗ ಆರೋಪಿಗಳೆಲ್ಲರೂ ಆ ಸ್ಥಳಕ್ಕೆ ಬಂದು ಮತ್ತು ಸದರಿ ಮೋಟಾರು ಸೈಕಲ್ಲಿನ ಹಿಂಭಾಗಕ್ಕೆ ಕಾರಿನಿಂದ ಗುದ್ದಿಸಿ ಹೇಮಂತ ಕುಮಾರ ಮತ್ತು ಸುನಿಲ್ ಕುಮಾರನನ್ನು ಕೆಳಕ್ಕೆ ಬೀಳಿಸಿ ನಂತರ ತಮ್ಮ ಕೈಗಳಲ್ಲಿ ಇದ್ದ ಲಾಂಗುಗಳಿಂದ ಹೊಡೆದು ಮತ್ತು ಹೇಮಂತ ಕುಮಾರನ ತಲೆಯ ಮೇಲೆ ಸಿಮೆಂಟು ಕಲ್ಲನ್ನು ಎತ್ತಿಹಾಕಿ ಕೊಲೆ ಮಾಡಿದ್ದಾರೆ ಮತ್ತು ಈ ಎಲ್ಲಾ ವಿಷಯಗಳು ನಾನು ಪೊಲೀಸ್ ಠಾಣೆಗೆ ಹೋದಾಗ ನನಗೆ ತಿಳಿದು ಬಂದಿದೆ ಎಂದರೆ ಆಮೇಲೆ ನನಗೆ ಆ ವಿಷಯಗಳು ಗೊತ್ತಾಯಿತು.

18. ದಿಃ 19.07.2021 ರಂದು ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸುಳ್ಳು.

19. 2021 ನೇ ಇಸವಿಗಿಂತ ಮೊದಲು ಸುಮಾರು 7 ವರುಷಗಳ ಕಾಲ ನಾನು ಅಭಿನಯ್ ರವರ ಬಳಿ ಕೆಲಸ ಮಾಡಿದ್ದೇನೆ. ಗೆಜ್ಜಲಗೆರೆ ಗ್ರಾಮದಲ್ಲಿ ವಾಸವಿರುವ ಎಲ್ಲರ ಪರಿಚಯ ನನಗೆ ಇದೆ ಎಂದರೆ ಸುಳ್ಳು. ನ್ಯಾಯಾಲಯದ ಮುಂದೆ ನಿಂತಿರುವ ಎಲ್ಲಾ ಆರೋಪಿಗಳ ಪರಿಚಯ ನನಗೆ ಇದೆ ಎಂದರೆ ಸುಳ್ಳು. ಗೆಜ್ಜಲಗೆರೆ ಗ್ರಾಮದ ಶ್ರೀಕಂಠ ಮತ್ತು ಅವರ ತಮ್ಮನಾದ ರವಿ ರವರ ಪರಿಚಯ ನನಗೆ ಇದೆ ಎಂದರೆ ಸುಳ್ಳು. ಮೇಲೆ ಹೇಳಿದ ಹೇಮಂತ ಕುಮಾರನು ಶ್ರೀಕಂಠ ರವರ ಒಬ್ಬನೇ ಮಗನಾಗಿದ್ದನು ಎಂದರೆ ನನಗೆ ಗೊತ್ತಿಲ್ಲ.

20. ಹೇಮಂತ ಕುಮಾರ ಮತ್ತು ಅಭಿನಯ್ ಮತ್ತು ಪವನಕುಮಾರ ರವರು ಒಟ್ಟಿಗೆ ಹಾಲು ಸಂಗ್ರಹ ಮತ್ತು ಹಾಲು ವಿತರಣೆ ಕೆಲಸವನ್ನು ಮಾಡುತ್ತಾ ಇದ್ದರು ಎಂದರೆ ಸರಿ.

21. ಪ್ರತಿದಿನ ನಾನು ಗೆಜ್ಜಲಗೆರೆ ಗ್ರಾಮದ ಬಳಿಯಲ್ಲಿಯೇ ಓಡಾಡುತ್ತೇನೆ ಮತ್ತು ಆ ಕಾರಣದಿಂದ ಆರೋಪಿಗಳಿಗೆ ಹೆದರಿಕೊಂಡು ಈ ನ್ಯಾಯಾಲಯದ ಮುಂದೆ ನಾನು ಸತ್ಯ ಸಂಗತಿಗಳನ್ನು ಮರೆಮಾಚುತ್ತಾ ಇದ್ದೇನೆ ಎಂದರೆ ಸುಳ್ಳು.

<u>ಪಾಟೀ ಸವಾಲುಃ- ಆರೋಪಿಗಳ ಪರವಾಗಿ ಶ್ರೀ. ಸಿ .ಪಿ. ವಕೀಲರಿಂದಃ-</u>

22. ನನ್ನ ಹುಟ್ಟಿದ ಊರು ಮಂಡ್ಯ ತಾಲ್ಲೂಕು ಹಂಪಾಪುರ ಗ್ರಾಮ ಆಗಿದೆ.

23. ಪ್ರತಿದಿನ ಬೆಳಿಗ್ಗೆ 4.30 ರ ವೇಳೆಗೆ ನಾನು ಮದ್ದೂರಿನಿಂದ ಹೊರಟು ಗೆಜ್ಜಲಗೆರೆ ಗ್ರಾಮಕ್ಕೆ ಹೋಗುತ್ತಿದ್ದೆನು ಮತ್ತು ಗೆಜ್ಜಲಗೆರೆ ಗ್ರಾಮದಲ್ಲಿ ಕ್ಯಾಂಟರ್ ವಾಹನವನ್ನು ತೆಗೆದುಕೊಂಡು ಹಳ್ಳಿಗಳಿಗೆ ಹೋಗಿ ಹಾಲನ್ನು ರೈತರಿಂದ ಪಡೆದುಕೊಂಡು ವಾಪಸ್ಸು ಬೆಳಿಗ್ಗೆ 9.30 ರ ಸುಮಾರಿಗೆ ಗೆಜ್ಜಲಗೆರೆ ಗ್ರಾಮದಲ್ಲಿ ಇರುವ ಕೆ ಎಂ ಎಫ್ ಫ್ಯಾಕ್ಟರಿಗೆ ಹೋಗಿ ಹಾಲು ಸರಬರಾಜು ಮಾಡುತ್ತಾ ಇದ್ದೆನು.

24. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಆ ರೀತಿ ನಾನು ರೈತರಿಂದ ಹಾಲನ್ನು ಪಡೆದುಕೊಂಡು ಕೆ ಎಂ ಎಫ್ ರವರಿಗೆ ಸರಬರಾಜು ಮಾಡುತ್ತಿದ್ದೆನು. ಪ್ರತಿದಿನ ಸಂಜೆ ವೇಳೆ ಸಹಾ 4.30 ರಿಂದ ರಾತ್ರಿ 9.00 ಅಥವಾ 9.30 ರವರಿಗೆ ರೈತರಿಂದ ನಾನು ಹಾಲನ್ನು ಸಂಗ್ರಹ ಮಾಡಿಕೊಂಡು ನಂತರ ಕೆ ಎಂ ಎಫ್ ರವರಿಗೆ ಹಸ್ತಾಂತರ ಮಾಡುತ್ತಾ ಇದ್ದೆನು.

25. ಹೇಮಂತ ಕುಮಾರನು ಮರಣ ಹೊಂದಿದ ಸುಮಾರು 2 ತಿಂಗಳ ನಂತರ ನಾನು ಪೊಲೀಸ್ ಠಾಣೆಗೆ ಹೋದಾಗ ಮೇಲೆ ಹೇಳಿದ ವಿಷಯಗಳು ನನಗೆ ತಿಳಿದು ಬಂದವು.

<u>ಮರು ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

ಏನೂ ಇಲ್ಲ .

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.